ಗೋವಿಂದ...'' ಎಂದು ದಾಸಯ್ಯನ ವೇಷ ಹಾಕಿದರೆ ಯಾರೂ ಅವನನ್ನು ಸಾಬರೆಂದು ಗುರುತು ಹಚ್ಚಲಿಕ್ಕೆ ಆಗುತ್ತಲೇ ಇರಲಿಲ್ಲ. ಅವನಿಗೆ ತುಂಬಾ ಚೆನ್ನಾಗಿ ಹತ್ತಿ ಬಂದ ವಿದ್ಯೆಯೆಂದರೆ ಕೀಲುಗೊಂಬೆ ಆಡಿಸುವುದು. ಗೊಂಬೆಯ ಬಣ್ಣದ ಲಂಗದಲ್ಲಿ ಕೈ ಇಟ್ಟು ಚಕಚಕನೆ ಬೊಂಬೆಯನ್ನು ತಿರುಗಿಸುತ್ತಿದ್ದ ಪರಿಗೆ ಮಕ್ಕಳು, ಹರೆಯದವರು, ಮುದುಕರಾದಿಯಾಗಿ ಕಣ್ಣು ರೆಪ್ಪೆ ಮಿಟುಕಿಸದೆ ಬೆಕ್ಕಸ ಬೆರಗಾಗಿ ನೋಡುತ್ತಿದ್ದರು. ಕೆಲವರು ಮನೆಗೆ ಕರೆದು ಖಾಯಿಶ್ಶಿನಿಂದ ಊಟ ಇಟ್ಟು ಕಳುಹಿಸುತ್ತಿದ್ದರು. ಪೆನುಕೊಂಡಾದ ರೌಡಿ ರಾಜಕಾರಣಿ ಪೆರಿಟಾಲ ರವಿ ಮರ್ಡರ್ ಆಗುವುದಕ್ಕಿಂತ ಒಂದೂವರೆ ತಿಂಗಳು ಮೊದಲು ಬುಡೇನನ್ನು ಮನಗೇ ಕರೆಸಿಕೊಂಡು ಒಂದು ಗಂಟೆ ಪೂರಾ ಕೀಲುಗೊಂಬೆ ಆಟವನ್ನು ನೋಡಿ, ಭೇಷ್ ಎಂದು ಜೊತೆಯಲ್ಲೆ ಊಟ ಮಾಡಿ ಮೂರು ಸಾವಿರ ರೂಪಾಯಿ ಕೈಗಿಟ್ಟು ಕಳಿಸಿದ್ದ. ಮರ್ಡರ್ ಆದ ದಿನ ರಾಂಪುರದಲ್ಲಿದ್ದ ಬುಡೇನ್ ಸಾಬಿ, ಸುದ್ದಿ ಕೇಳಿ ಕಣ್ಣಲ್ಲಿ ನೀರು ತುಂಬಿಸಿಕೊಂಡು ಹೋಗಿ ಹೆಣದ ಪಾದಕ್ಕೆ ಹಣೆಯೊತ್ತಿ ಬಂದಿದ್ದ. ಸಂದರ್ಭ ಸಿಕ್ಕಿದಾಗಲೆಲ್ಲ ಅಜ್ಜಿ ಬೂಬಮ್ಮ ಅವನ ಬಲಗೈ ಹೆಬ್ಬೆರಳನ್ನು ನೋಡಿ, ''ಬುಡೇನ ನಿಂಗೆ ತುಂಬಾ ಒಳ್ಳೆ ಅನ್ನದ ರೇಖೆ ಐತೆ ಕಣೋ. ತಿಪ್ಪೇಲಿ ಬಿದ್ದಿದ್ರೂ ನಿನ್ ಬಾಯ್ಗೆ ಬಿಸಿಬಿಸಿ ಬಿರಿಯಾನಿ ಬಂದು ಬೀಳ್ತೈತೆ...'' ಎಂದು ಹೇಳುತ್ತಿದ್ದ ಮಾತುಗಳನ್ನು ನೆನಪಿಸಿಕೊಂಡು ಹೊಟ್ಟೆ ಸವರಿಕೊಳ್ಳುತ್ತಿದ್ದ.

ಜಾತ್ರೆಗಳಲ್ಲಿ ವಾರಗಟ್ಟಲೆ ಕೀಲುಗೊಂಬೆ ಆಡಿಸುತ್ತಾ ಬುಡೇನ್ ಸಾಬಿಯು ಜೇಬು ತುಂಬುವಂತೆ ಕಾಸು ಗಳಿಸುತ್ತಿದ್ದ. ಅನಂತಪುರ, ಪೆನುಗೊಂಡ, ಹಿಂದೂಪುರ ಮುಂತಾದ ಆಂಧ್ರದ ಊರುಗಳಲ್ಲೂ ಬುಡೇನ್ ಸಾಬನು ಫೇಮಸ್ ಆಗಿಬಿಟ್ಟಿದ್ದ. ಹಾಗಾಗಿ ಆಂಧ್ರದ ದೊಡ್ಡ ದೊಡ್ಡ ಜಮೀನುದಾರರು ಮದುವೆಗಳಲ್ಲಿ ಕೀಲುಗೊಂಬೆ ಆಡಿಸಲು ಬುಡೇನ್ ಸಾಬನನ್ನು ಕರೆಸಿಕೊಳ್ಳುತ್ತಿದ್ದರಲ್ಲದೆ ಕೈ ತುಂಬಾ ಕಾಸಿಟ್ಟು ಕಳಿಸುತ್ತಿದ್ದರು. ಬೂಬಮ್ಮ ಸತ್ತಾಗ ಇಪ್ಪತ್ತು ವರ್ಷಗಳನ್ನು ಪೂರೈಸಿದ್ದ ಬುಡೇನ್ ಬಿಕ್ಕಿ ಬಿಕ್ಕಿ ಅತ್ತಿದ್ದ. ನಂತರ ಅವನು ರಾಂಪುರದ ಮನೆಗೆ ಬೀಗ ಹಾಕಿ ತಿಂಗಳಾನುಗಟ್ಟಲೆ ತಿರುಗಾಡುತ್ತಾ ಹೊರಗಡೆಯೇ ಉಳಿದುಬಿಡುತ್ತಿದ್ದ. ರಾಂಪುರಕ್ಕೆ ಬಂದರೆ ಎರಡು ಮೂರು ತಿಂಗಳು ರಾಂಪುರದಲ್ಲಿಯೇ ಉಳಿದುಬಿಡುತ್ತಿದ್ದ. ರಾಂಪುರದಲ್ಲಿದ್ದಾಗ ಒಂದೊಂದು ಸಾರಿ ತಾನೇ ಅಡುಗೆ ಮಾಡಿಕೊಳ್ಳುತ್ತಿದ್ದ. ಕೆಲವೊಮ್ಮೆ ಕೊರಟಗೆರೆಯಲ್ಲೊ, ಮಧುಗಿರಿಯಲ್ಲೊ ಹೋಟೆಲ್‌ನಲ್ಲಿ ಊಟ ಮುಗಿಸುತ್ತಿದ್ದ. ಇಲ್ಲವೇ ತನ್ನ ಕ್ಲೋಸ್ ಫ್ರೆಂಡ್ ಅತಾವುಲ್ಲಾನ ಮನೆಯಲ್ಲಿ ಊಟ ಮಾಡುತ್ತಿದ್ದ. ಆಗಾಗ ಅತಾವುಲ್ಲಾನ ಜೇಬಿಗೆ ಬೇಡಬೇಡವೆಂದರೂ ಮನಸ್ಸಿಗೆ ಬಂದಷ್ಟು ಕಾಸು ಇಡುತ್ತಿದ್ದ. ಹತ್ತನ್ನೆರಡು ವರ್ಷಗಳಲ್ಲಿ ತಾನು ಎಷ್ಟು ಕೆಲ್ಸ ಮಾಡ್ಬೇಕೊ ಮಾಡಿ ಒಂದಿಪ್ಪತ್ತು ಸಾವಿರ ರೂಪಾಯಿ ಉಳಿಸಿದ್ದ. ಒಂದು ದಿನ ಹಾಗೇ ಗೆಳೆಯ ಅತಾವುಲ್ಲಾನ ಜೊತೆ ಹೋಗಿ ಕಷ್ಟಕಾಲಕ್ಕಿರಲಿ ಅಂತ ಬ್ಯಾಂಕಿನಲ್ಲಿ ಠೇವಣಿ ಇಟ್ಟಿದ್ದ. ಕೆಲಕಾಲದ ನಂತರ ಇಬ್ಬರೂ ಅದನ್ನು ಮರೆತೇ ಬಿಟ್ಟಿದ್ದರು.

ಬುಡೇನ್ ಸಾಬನು ಹರೆಯಕ್ಕೆ ಬಂದಾಗ ಅವನಿಗೆ ಹಿಂದುಮುಂದು ಯಾರೂ ಇಲ್ಲವೆಂದು, ಮದುವೆ ಮಾಡಿದರೆ ಹುಡುಗಿ ಸುಖವಾಗಿರುತ್ತಾಳೆಂದು ಒಂದೆರಡು ಮೂರು ಕಡೆಯಿಂದ ಹೆಣ್ಣು ಕೊಡುವವರೂ ಮುಂದಾಗಿದ್ದರು. ಮಧುಗಿರಿಯ ಹೋಲ್ ಸೇಲ್ ಮಾವಿನ ಹಣ್ಣಿನ ವ್ಯಾಪಾರಿ ಖಲಂದರ್ ಪಾಷಾ ತನ್ನ ಹಿರಿ ಮಗಳನ್ನು ಮದುವೆಯಾದರೆ ಕೊರಟಗೆರೆಯಲ್ಲಿ ಒಂದು ಹಣ್ಣಿನ ಅಂಗಡಿ ಹಾಕಿಕೊಡುವುದಾಗಿ ಯಾರ ಕೈಲೋ ಹೇಳಿಕಳಿಸಿದ್ದ. ಆದರೆ ಅದ್ಯಾಕೋ ಅವನು ತಲೆ ಅಲ್ಲಾಡಿಸಿಬಿಟ್ಟಿದ್ದ. ''ಅವುನ್ಯಾತ್ರ್ ಸಾಬಿ ತೆಗಿ, ಏನಾದ್ರೂ ಯಾಪಾರ ಗಿಪಾರ ಮಾಡೋದು ಬಿಟ್ಟು ಅದೇನೋ ಬೊಂಬೆ ಆಡಿಸ್ಕೊಂಡು ಮಂಡ್ರಂಗೆ ಊರೂರು ಅಲಿತಾ ಬಿದ್ದವ್ನೆ. ನಮ್ಮ ಸಾಬುರ್ ಕುಲುಕ್ಕೆ ಅವಮಾನ...'' ಎಂದು ರಾಂಪುರದ ಸಾಬರು ಮಾತನಾಡಿಕೊಳ್ಳುತ್ತಿದ್ದರು. ಅವನು ತಿಂಗಳಾನುಗಟ್ಟಲೆ ದೊಂಬಿದಾಸರ ಜೊತೆ, ಗಂಗೆತ್ತು ಆಡಿಸುವವರ ಜೊತೆ ಹೋಗಿಬಿಡುತ್ತಿದ್ದ.